ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ    ದಿನಾಂಕ : DATE : 20/06/2019

# ರಂಗಕರ್ಮಿ ಡಿ.ಕೆ.ಚೌಟ ನಿಧನ

## ಚಿತ್ರಕಲಾ ಪರಿಷತ್ ಪ್ರವರ್ಧಮಾನಕ್ಕೆ ಅವಿರತ ಶ್ರಮ, ತುಳು ಸಾಹಿತ್ಯಕ್ಕೆ ಅಪಾರ ಕೊಡುಗೆ ಸಲ್ಲಿಕೆ

**ವಿಕ ಸುದ್ದಿಲೋಕ** ಬೆಂಗಳೂರು

ಹಿರಿಯ ರಂಗಕರ್ಮಿ ಡಿ.ಕೆ.ಚೌಟ (82) (ದರ್ಬೆ ಕೃಷ್ಣಾನಂದ ಚೌಟ) ಅವರು ಬುಧವಾರ ಬೆಂಗಳೂರಿನಲ್ಲಿ ನಿಧನರಾದರು.

ದೀರ್ಘಕಾಲ ಹೃದಯ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿದ್ದ ಚೌಟ ಅವರನ್ನು 15 ದಿನಗಳ ಹಿಂದೆ ಜಯದೇವ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನಂತರ ಮನೆಗೆ ಕರೆ ತರಲಾಗಿತ್ತು. ಬುಧವಾರ ಬೆಳಗ್ಗೆ ಮತ್ತೆ ಎದೆನೋವು ಕಾಣಿಸಿಕೊಂಡಿದ್ದರಿಂದ ತಕ್ಷಣ ಅವರನ್ನು ಮತ್ತೆ ಜಯದೇವ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತಾದರೂ ಹೃದಯಾಘಾತದಿಂದ ನಿಧನರಾದರು.

ಮೃತರಿಗೆ 'ಆನೆಗಳ ಡಾಕ್ಟರ್' ಎಂದೇ ಖ್ಯಾತಿ ಪಡೆದಿರುವ ಮಗಳು ಪ್ರಜ್ಞಾ ಚೌಟ, ಪುತ್ರ ಬಾಲಿವುಡ್ ಸಂಗೀತ ನಿರ್ದೇಶಕ ಸಂದೀಪ್ ಚೌಟ ಇದ್ದಾರೆ. ಪಾರ್ಥಿವ ಶರೀರವನ್ನು ಬಸವೇಶ್ವರನಗರ ಪೊಲೀಸ್ ಠಾಣೆ ಹಿಂಭಾಗದಲ್ಲಿರುವ ಸ್ವಗೃಹದಲ್ಲಿ ಸಾರ್ವಜನಿಕ ದರ್ಶನಕ್ಕೆ ಬುಧವಾರ ಸಂಜೆ ಇಡಲಾಗಿತ್ತು. ಗುರುವಾರ ಬೆಳಗ್ಗೆ 7 ರಿಂದ 8 ಗಂಟೆ ಸುಮಾರಿಗೆ ಹರಿಶ್ಚಂದ್ರಘಾಟ್‌ನಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

1938ರ ಜೂನ್ 1 ರಂದು ಜನಿಸಿದ್ದ ಚೌಟ ಅವರು ಕಾಸರಗೋಡು ಜಿಲ್ಲೆ ಮೀಯಪದವಿನ ದರ್ಬೆ ಮನೆತನದ ಪಟೇಲರಾಗಿದ್ದ ನಾರಾಯಣ ಚೌಟ ಮತ್ತು ಮೋಹಿನಿ ದಂಪತಿಯ ಪುತ್ರ. ಇವರು ತಮ್ಮ ತಂದೆಯಂತೆಯೇ ಸಾಹಿತ್ಯ, ನಾಟಕ, ಯಕ್ಷಗಾನ, ಸಂಗೀತ, ತಾಳಮದ್ದಲೆಯಲ್ಲಿ ಆಸಕ್ತಿ ಹೊಂದಿದ್ದರು. 'ರಂಗ ನಿರಂತರ'ದ ಕಾರ್ಯಾಧ್ಯಕ್ಷರಾಗಿದ್ದ ಚೌಟ, ಚಿತ್ರಕಲಾ ಪರಿಷತ್‌ನಲ್ಲಿ ದೀರ್ಘಕಾಲ ಕಾರ್ಯದರ್ಶಿ ಆಗಿದ್ದರು. ಕಳೆದ ವರ್ಷ ನಡೆದ ಸಿಜಿಕೆ ರಂಗೋತ್ಸವದ ಅಧ್ಯಕ್ಷರೂ ಆಗಿದ್ದರು. ಚಿತ್ರಕಲಾ ಪರಿಷತ್ ಪ್ರತಿವರ್ಷ ಸಂಘಟಿಸುವ 'ಚಿತ್ರ ಸಂತೆ'ಯ ಪ್ರೇರಕ ಶಕ್ತಿಯಲ್ಲಿ ಡಿ.ಕೆ.ಚೌಟ ಪ್ರಮುಖರು. 'ಗಳಿಸೋಣ-ಬೆಳೆಸೋಣ-ಹಂಚಿತಿನ್ನೋಣ' ಎನ್ನುವುದು ನನ್ನ ಮನೆತನದಿಂದ ನನಗೆ ಬಂದಿರುವ ಸಂಸ್ಕಾರ ಎಂದು ಹೇಳಿಕೊಳ್ಳುತ್ತಿದ್ದ ಇವರು ಚಿತ್ರ ಮತ್ತು ರಂಗ ಕಲಾವಿದರ ನಡುವೆ ಕೊಡುಗೈ ದಾನಿ ಎನ್ನುವ ಹೆಗ್ಗಳಿಕೆ ಹೊಂದಿದ್ದರು.



### ಬೆಂಗಳೂರಿನ ಮೊದಲ ರೆಸಾರ್ಟ್‌ನ ರೂವಾರಿ

**ಮುಂಬಯಿನಲ್ಲಿ ಸ್ನಾತಕೋತ್ತರ ಪದವಿ ಪಡೆದ ಬಳಿಕ 1955 ರಲ್ಲಿ ಜನರಲ್ ಇನ್ಶೂರೆನ್ಸ್ ಕಂಪನಿ ಪ್ರತಿನಿಧಿಯಾಗಿ ಆಫ್ರಿಕಾಗೆ ತೆರಳಿದ್ದರು. ಘಾನಾ ಮತ್ತು ನೈಜೀರಿಯಾ ದೇಶಗಳಲ್ಲಿ 25 ವರ್ಷ ಸೇವೆ ಸಲ್ಲಿಸಿದ ಅವರು, 1980 ರಲ್ಲಿ ಸ್ವದೇಶಕ್ಕೆ ಮರಳಿ ಬೆಂಗಳೂರಿನಲ್ಲಿ ಮೊಟ್ಟ ಮೊದಲ ರೆಸಾರ್ಟ್ 'ಸನ್‌ವ್ಯಾಲಿ' ಆರಂಭಿಸಿದ್ದರು. ಇವರ ಮಾಲೀಕತ್ವದ ಪಿ.ಸಿ.ಎಕ್ಸ್‌ಪೋರ್ಟ್ ರಫ್ತು ಸಂಸ್ಥೆ ಘಾನಾ, ನೈಜೀರಿಯಾ ಸೇರಿದಂತೆ ಆಫ್ರಿಕಾದ ದೇಶಗಳು ಮತ್ತು ಲಂಡನ್‌ನಲ್ಲಿ ಭಾರೀ ಹೆಸರುವಾಸಿಯಾಗಿದ್ದವು. ಉದ್ಯಮಿಯಾಗಿ ಯಶಸ್ಸು ಕಂಡ ಬಳಿಕ ಹುಟ್ಟೂರಿಗೆ ತೆರಳಿ 100 ಎಕರೆ ಜಮೀನು ಖರೀದಿಸಿ ನಾನಾ ಬೆಳೆಗಳನ್ನು ಬೆಳೆಯುವ ಯಶಸ್ವಿ ಕೃಷಿಕರೂ ಆಗಿದ್ದರು.**

ತುಳು ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ಒಬ್ಬರಾದ ಚೌಟ 'ಆನಂದ ಕೃಷ್ಣ' ಕಾವ್ಯನಾಮದಿಂದ ಹಲವು ಕೃತಿಗಳನ್ನು ರಚಿಸಿದ್ದಾರೆ. ತುಳು ಭಾಷೆಯಲ್ಲಿ ಬರೆದ 'ಪಿಲಿಪತ್ತಿ ಗಡಸ್', 'ಮಿತ್ತಬೈಲ್ ಯಮುನಕ್ಕ', 'ಕರಿಯಜ್ಜೆರೆನ ಕುಲು' ಕಾದಂಬರಿ ಮತ್ತು ನಾಟಕಗಳು ಸಾಹಿತ್ಯ ಲೋಕದಲ್ಲಿ ಚರ್ಚೆಗೆ ಗ್ರಾಸ ಆಗಿದ್ದವು. ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಮಂಗಳೂರು ವಿವಿ ಗೌರವ ಡಾಕ್ಟರೇಟ್, ರಾಜ್ಯೋತ್ಸವ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಸೇರಿ ಹಲವು ಗೌರವಗಳಿಗೆ ಪಾತ್ರರಾಗಿದ್ದಾರೆ.

7